KARNATAKA LEGISLATIVE ASSEMBLY RESEARCH AND REFERENCE BRANCH
PAPER CLIPPINGS
DEPARTMENT / SUBJECT:
NAME OF THE NEWS PAPER:
DATE: 3/6/20




# ಮೋದಿಗೆ 66% ಜನಬೆಂಬಲ

ನವದೆಹಲಿ: ಕೋವಿಡ್-19 ವಿರುದ್ಧ ಹೋರಾಟ ಮತ್ತು ಪರಿಸ್ಥಿತಿ ನಿಭಾಯಿಸಿದ್ದಕ್ಕೆ ಜಾಗತಿಕ ಮನ್ನಣೆ ಪಡೆದಿರುವ ಪ್ರಧಾನಿ ನರೇಂದ್ರ ಮೋದಿಯನ್ನು ಶೇ. 66.20 ಭಾರತೀಯರು ಬೆಂಬಲಿಸಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗೆ ಶೇ. 23.21 ಬೆಂಬಲ ವ್ಯಕ್ತವಾಗಿದೆ.

ಪ್ರಧಾನಿಗೆ ಅತಿ ಹೆಚ್ಚು ಮೆಚ್ಚುಗೆ ವ್ಯಕ್ತವಾಗಿರುವುದು ಒಡಿಶಾದಲ್ಲಿ (ಶೇ. 95.60). ಈ ವಿಷಯದಲ್ಲಿ ಕರ್ನಾಟಕ (ಶೇ.82.56) ಆರನೇ ಸ್ಥಾನದಲ್ಲಿ ಇದೆ. ಗೋವಾ (ಶೇ.52.40), ಕೇರಳ (ಶೇ.46.87) ಮತ್ತು ತಮಿಳುನಾಡುಗಳಲ್ಲಿ (ಶೇ.42.76) ರಾಹುಲ್ ಗಾಂಧಿ ಜನಪ್ರತಿಯತೆ ಹೆಚ್ಚಿದೆ. ಈ ರಾಜ್ಯಗಳಲ್ಲಿ ಕ್ರಮವಾಗಿ ಶೇ. 41.30, ಶೇ. 36.40 ಮತ್ತು ಶೇ. 37.64 ಜನರು ಮೋದಿಯನ್ನು ಬೆಂಬಲಿಸಿದ್ದಾರೆ.

ಕೇಂದ್ರದ ಎನ್‌ಡಿಎ ಸರ್ಕಾರಕ್ಕೆ ಹಿಮಾಚಲ ಪ್ರದೇಶ (ಶೇ.97.46), ಒಡಿಶಾ (ಶೇ.95.73) ಮತ್ತು ಛತ್ತೀಸ್‌ಗಢದಲ್ಲಿ (ಶೇ.91.42) ಶೇ. 90ಕ್ಕಿಂತ ಅಧಿಕ ಅಂಕ ದೊರೆತಿದ್ದು, ಕರ್ನಾಟಕದಲ್ಲಿ ಶೇ. 67.94 ಜನರ ಬೆಂಬಲ ವ್ಯಕ್ತವಾಗಿದೆ. ದೇಶದಲ್ಲಿ ಒಟ್ಟಾರೆ ಶೇ. 62 ಜನರು ಸರ್ಕಾರವನ್ನು ಹೆಂಬಲಿಸಿದ್ದಾರೆ. ಕೇಂದ್ರ ಸರ್ಕಾರಕ್ಕೆ ಕಡಿಮೆ ಅಂಕ ನೀಡಿದ ರಾಜ್ಯಗಳಲ್ಲಿ ಮೊದಲ ಎರಡು ಸ್ಥಾನ ಬಿಜೆಪಿಯೇ ಆಡಳಿತದ ನೇತೃತ್ವವಹಿಸಿರುವ ಗೋವಾ (ಶೇ.9.62) ಮತ್ತು ಹರಿಯಾಣ (ಶೇ.28.73)ಗಳಾಗಿವೆ. ಸಿವೋಟರ್ಸ್ ಸಂಸ್ಥೆಯು 'ಸ್ಟೇಟ್ ಆಫ್ ದಿ ನೇಷನ್ 2020' ಶೀರ್ಷಿಕೆಯಡಿ ಈ ಸಮೀಕ್ಷೆ ನಡೆಸಿದ್ದು, ಪ್ರತಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ತಲಾ ಮೂರು ಸಾವಿರ ಜನರು ಸರ್ವೆಗೆ ಪ್ರತಿಕ್ರಿಯಿಸಿದ್ದಾರೆ.

ವಿ.ವಾ: 03.06.2020

### ಟಾಪ್ 8 ಸಿಎಂಗಳು

| ರಾಜ್ಯ | ಸಿಎಂ | ಜನಪ್ರಿಯತೆ |
|---|---|---|
| ಒಡಿಶಾ | ನವೀನ್ ಪಟ್ನಾಯಕ್ | 82.96% |
| ಛತ್ತೀಸ್‌ಗಢ | ಭೂಪೇಶ್ ಬಘೇಲ್ | 81.06% |
| ಕೇರಳ | ಪಿಣರಾಯಿ ವಿಜಯನ್ | 80.28% |
| ಆಂಧ್ರಪ್ರದೇಶ | ಜಗನ್ ಮೋಹನ್ ರೆಡ್ಡಿ | 78.01% |
| ಮಹಾರಾಷ್ಟ್ರ | ಉದ್ಧವ್ ಠಾಕ್ರೆ | 76.52% |
| ದೆಹಲಿ | ಅರವಿಂದ ಕೇಜ್ರಿವಾಲ್ | 74.18% |
| ಹಿಮಾಚಲ ಪ್ರದೇಶ | ಜೈರಾಂ ಠಾಕೂರ್ | 73.96% |
| ಕರ್ನಾಟಕ | ಬಿ.ಎಸ್. ಯಡಿಯೂರಪ್ಪ | 67.21% |

### ಕಡಿಮೆ ಬೆಂಬಲ ಪಡೆದ 8 ಸಿಎಂಗಳು

| ರಾಜ್ಯ | ಸಿಎಂ | ಶೇಕಡವಾರು |
|---|---|---|
| ಹರಿಯಾಣ | ಮನೋಹರ್ ಲಾಲ್ ಖಟ್ಟರ್ | 4.47 |
| ಉತ್ತರಾಖಂಡ | ತ್ರಿವೇಂದ್ರ ಸಿಂಗ್ ರಾವತ್ | 17.72 |
| ಪಂಜಾಬ್ | ಕ್ಯಾ.ಅಮರಿಂದರ್ ಸಿಂಗ್ | 27.51 |
| ಬಿಹಾರ | ನಿತೀಶ್ ಕುಮಾರ್ | 30.84 |
| ತಮಿಳುನಾಡು | ಇ.ಕೆ.ಪಳನಿಸ್ವಾಮಿ | 41.21 |
| ಗೋವಾ | ಡಾ.ಪ್ರಮೋದ್ ಸಾವಂತ್ | 42.79 |
| ಪ.ಬಂಗಾಳ | ಮಮತಾ ಬ್ಯಾನರ್ಜಿ | 52.06 |
| ತೆಲಂಗಾಣ | ಕೆ.ಚಂದ್ರಶೇಖರ್ ರಾವ್ | 54.22 |

### ಕೇಂದ್ರ ಸರ್ಕಾರಕ್ಕೆ ಕಡಿಮೆ ಅಂಕ ನೀಡಿದ 10 ರಾಜ್ಯ

| ರಾಜ್ಯ | ಶೇಕಡವಾರು |
|---|---|
| ಗೋವಾ | 9.62 |
| ಹರಿಯಾಣ | 28.73 |
| ಕೇರಳ | 30.73 |
| ತಮಿಳುನಾಡು | 31.33 |
| ಜಮ್ಮು-ಕಾಶ್ಮೀರ | 46.14 |
| ಉತ್ತರಾಖಂಡ | 47.10 |
| ದೆಹಲಿ | 51.75 |
| ಉತ್ತರ ಪ್ರದೇಶ | 52.03 |
| ಕೇಂದ್ರಾಡಳಿತ ಪ್ರದೇಶಗಳು | 58.49 |
| ಪಶ್ಚಿಮ ಬಂಗಾಳ | 58.68 |

### ಕೇಂದ್ರ ಸರ್ಕಾರಕ್ಕೆ ಅತಿ ಹೆಚ್ಚು ಬೆಂಬಲ ವ್ಯಕ್ತಪಡಿಸಿದ ರಾಜ್ಯಗಳು

| ರಾಜ್ಯ | ಶೇಕಡವಾರು |
|---|---|
| ಹಿಮಾಚಲಪ್ರದೇಶ | 97.46 |
| ಒಡಿಶಾ | 95.73 |
| ಛತ್ತೀಸ್‌ಗಢ | 91.42 |
| ಆಂಧ್ರಪ್ರದೇಶ | 78.65 |
| ಜಾರ್ಖಂಡ್ | 76.84 |
| ಗುಜರಾತ್ | 75.04 |
| ಅಸ್ಸಾಂ | 73 |
| ಈಶಾನ್ಯ ರಾಜ್ಯಗಳು | 72.75 |
| ತೆಲಂಗಾಣ | 68.96 |
| ಕರ್ನಾಟಕ | 67.94 |

### ಪ್ರಧಾನಿಗೆ ಉಘೇ ಎಂದ ಟಾಪ್ 10 ರಾಜ್ಯಗಳು

| ರಾಜ್ಯ | ಶೇಕಡವಾರು |
|---|---|
| ಒಡಿಶಾ | 95.60 |
| ಹಿಮಾಚಲಪ್ರದೇಶ | 93.95 |
| ಛತ್ತೀಸ್‌ಗಢ | 92.73 |
| ಆಂಧ್ರಪ್ರದೇಶ | 83.60 |
| ಜಾರ್ಖಂಡ್ | 82.97 |
| ಕರ್ನಾಟಕ | 82.56 |
| ಗುಜರಾತ್ | 76.42 |
| ಅಸ್ಸಾಂ | 74.59 |
| ತೆಲಂಗಾಣ | 71.51 |
| ಮಹಾರಾಷ್ಟ್ರ | 71.48 |

ಸುದ್ದಿ ಸಮಗ್ರ




### ಪಟ್ನಾಯಕ್ ನಂ. 1 ಸಿಎಂ



ಜನಪ್ರಿಯ ಮುಖ್ಯಮಂತ್ರಿಯ ಗರಿ ಒಡಿಶಾದ ಸಿಎಂ ನವೀನ್ ಪಟ್ನಾಯಕ್ (ಶೇ. 82.96) ಮುಡಿಗೇರಿದೆ. ಕರ್ನಾಟಕ ಸಿಎಂ ಬಿ.ಎಸ್. ಯಡಿಯೂರಪ್ಪ (ಶೇ.67.21) ಎಂಟನೇ ಸ್ಥಾನದಲ್ಲಿದ್ದಾರೆ. ಹರಿಯಾಣದ ಸಿಎಂ ಮನೋಹರ್ ಲಾಲ್ ಖಟ್ಟರ್ (ಶೇ. 4.47), ಉತ್ತರಾಖಂಡದ ಸಿಎಂ ತ್ರಿವೇಂದ್ರ ಸಿಂಗ್ ರಾವತ್ (ಶೇ.17.72) ಜನಪ್ರಿಯತೆ ಪಟ್ಟಿಯ ಕಡೆಯ ಎರಡು ಸ್ಥಾನದಲ್ಲಿ ಇದ್ದಾರೆ.